ಅಧ್ಯಕ್ಷರು :— ಮಂಡಿಸಲಾಯಿತು.

(2) ವಿತ್ತೀಯ ಕಾರ್ಯಕಲಾಪ

1998-99ನೇ ಸಾಲಿನ ಪೂರಕ ಅಂದಾಜುಗಳನ್ನು ಮಂಡಿಸುವುದು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205(1)ನೇ ಅನುಚ್ಛೇದದ ಮೇರೆಗೆ 1998-99ನೇ ಸಾಲಿನ ಪೂರಕ ಅಂದಾಜುಗಳನ್ನು (ಅಂತಿಮ ಕಂತು) ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಮಂಡಿಸಲಾಯಿತು.

ನಿಯಮ 69ರ ಮೇರೆಗೆ ಚರ್ಚೆ

ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ನಿಯಮ 69ರ ಮೇರೆಗೆ ಚರ್ಚೆ ಆಗುವ ಮೊದಲು ಸರ್ಕಾರ ಹೊರಡಿಸಿದ್ದ ಇತ್ತೀಚಿನ ಮೀಸಲಾತಿ ಆದೇಶವನ್ನು ಹಿಂತೆಗೆದುಕೊಳ್ಳುವ ಬಗ್ಗೆ ನಿರ್ಧಾರ ಆಗಬೇಕಿತ್ತು. ಏಕೆಂದರೆ ಬೇರೆ ಇಂಟರೆಸ್ಟೆಡ್ ಪರ್ಸನನ್ಸ್ ಇರುತ್ತಾರೆ, ಅದೆಲ್ಲಕ್ಕಿಂತಲೂ ಇದು ಸ್ವಲ್ಪ ಡೀಪ್ ಆಗಿ ಎಲ್ಲವನ್ನೂ ಯೋಚನೆ ಮಾಡಿ ಮಾಡಬೇಕಾಗುತ್ತದೆ.

ಅಧ್ಯಕ್ಷರು :— ಇವತ್ತು ಸಾಯಂಕಾಲ ಮೀಟಿಂಗ್ ಕರೆಯುತ್ತೇನೆ. ಈ ಮೀಟಿಂಗ್‌ನಲ್ಲಿ ತಾವೇ ಇರುತ್ತೀರಿ, ನಾನು ಏನೂ ಮಾಡುವುದಿಲ್ಲ, ಎಲ್ಲಾ ಪಕ್ಷದ ಮುಖಂಡರುಗಳು, ಸರ್ಕಾರದ ಪ್ರತಿನಿಧಿಗಳು ಇರುತ್ತಾರೆ. ತಾವು ಅಲ್ಲಿ ತೀರ್ಮಾನ ಮಾಡಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಏಕೆಂದರೆ ಹೀಗೆ ಡಿಲೇ ಆಗುತ್ತಾ ಹೋದರೆ ಈ ಅಧಿವೇಶನ ಮುಗಿದ ಮೇಲೆ ಪುನಃ ಅದರ ಪ್ರಾಮುಖ್ಯತೆ ಉಳಿಯುವುದಿಲ್ಲ. ಮತ್ತು ನಾವೆಲ್ಲಾ ಅದರ ಬಗ್ಗೆ ಆಸಕ್ತಿ ತೋರಿಸುತ್ತಿಲ್ಲ ಅಂದರೆ ಪುನಃ ಹೊರಗಡೆ ಗಲಾಟೆ ಆಗುತ್ತದೆ.

ಅಧ್ಯಕ್ಷರು :— ಶ್ರೀ ಡಿ. ಮಂಜುನಾಥ್ ಅವರು ನನಗೆ ಬೆಳಿಗ್ಗೆ ಫೋನ್ ಮಾಡಿದ್ದರು. ಮಾನ್ಯ ಆರೋಗ್ಯ ಮಂತ್ರಿಯವರು ಈಗತಾನೇ ಪತ್ರ ಬರೆದು ಕಳುಹಿಸಿದರು. ನಾನು ಇವತ್ತೇ ಮಧ್ಯಾಹ್ನ ಮೂರೂವರೆಯಿಂದ ನಾಲ್ಕು ಗಂಟೆ ಸಮಯದಲ್ಲಿ ಮೀಟಿಂಗ್ ಫಿಕ್ಸ್ ಮಾಡಿ ತಮಗೆ ಹೇಳಿಕಳುಹಿಸುತ್ತೇನೆ. ಹಾಗೆಯೇ ಮುಖ್ಯಮಂತ್ರಿಗಳಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ಉಪ ಮುಖ್ಯಮಂತ್ರಿಗಳು ಕೂಡ ಮೀಟಿಂಗ್‌ನಲ್ಲಿ ಇರುತ್ತಾರೆ.